National Seminar on Human Rights
Tumbe Group of International Journals
ISSN: 2581-8511 Volume-5(Special Issue 1)2022

# ಕೋವಿಡ್ ನಿರ್ವಹಣೆಯಲ್ಲಿ ಮಾಧ್ಯಮಗಳ ಪಾತ್ರ-ಒಂದು ಅಧ್ಯಯನ

**ಡಾ. ಸಿ. ಸುಧಾರಾಣಿ**,

ಸಹಾಯಕ ಪ್ರಾಧ್ಯಾಪಕರು,
ಎಸ್‌ಜೆಎಂ ಮಹಿಳಾ ಕಾಲೇಜು,
ಚಿತ್ರದುರ್ಗ -577501
ಮೊ: 9448017271 ಇಮೇಲ್- sudhaketan@gmail.com

**ಸಾರಾಂಶ**

ಸಂವಹನ ಅತಿ ಮುಖ್ಯ. ಪಶು, ಪಕ್ಷಿ, ಪ್ರಾಣಿ ಜಲಚರಗಳಷ್ಟೇ ಅಲ್ಲದೆ ಗಿಡಮರಗಳ ಮಧ್ಯೆಯೂ ಸಂವಹನ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಮಾನವ ಜೀವನವೂ ಇದರಿಂದ ಹೊರತಲ್ಲ. ದೇಶ, ಭಾಷೆ, ಪ್ರಪಂಚದ ನಡುವೆ ಸಂಪರ್ಕ ಬೆಸೆದಿರುವುದೇ ಸಂವಹನದಿಂದ. ಕೈಸನ್ನೆ, ಕಣ್ಣುಸನ್ನೆ, ಚಿತ್ರಗಳ ಮೂಲಕ ಆರಂಭಗೊಂಡ ಸಂವಹನ ಇಂದು ವಿವಿಧ ಮಾಧ್ಯಮಗಳ ಮೂಲಕ ನಡೆಯುತ್ತಲಿದೆ. ಪತ್ರಿಕೆ, ಪುಸ್ತಕ, ದೂರದರ್ಶನ, ಆಕಾಶವಾಣಿ, ಕಂಪ್ಯೂಟರ್, ಇಂಟರ್‌ನೆಟ್, ಉಪಗ್ರಹಗಳವರೆಗೆ ಸಮೂಹ ಮಾಧ್ಯಮ ಬೆಳೆದಿದೆ.

ಸಮೂಹ ಮಾಧ್ಯಮಗಳು ಬಹಳ ಕಾಲದಿಂದಲೂ ಪ್ರಬಲ ಶಕ್ತಿಗಳೆಂದು ಗುರುತಿಸಲ್ಪಟ್ಟಿವೆ. ನಮ್ಮನ್ನು ನಾವು ಹಾಗೂ ಜಗತ್ತನ್ನು ನೋಡುವ ಮತ್ತು ಅನುಭವಿಸುವ ರೀತಿಯನ್ನು ಕಲಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ತಾಂತ್ರಿಕ ಪರಿವರ್ತನೆಗೆ ಕಾರಣವಾಗಿ ಆಕಾಶವಾಣಿ, ದೂರದರ್ಶನ ಹಾಗೂ ಪತ್ರಿಕೆಗಳನ್ನು ರೂಪಿಸುವಲ್ಲಿ ಮನುಷ್ಯನ ಶೋಧನಾ ದೃಷ್ಟಿ ಕಾರಣವಾಯಿತು.

ನಾಯಿ ಮನುಷ್ಯನನ್ನು ಕಚ್ಚಿದರೆ ಸುದ್ದಿಯಲ್ಲ, ಮನುಷ್ಯ ನಾಯಿಯನ್ನು ಕಚ್ಚಿದರೆ ಅದು ಸುದ್ದಿ ಎಂಬ ಮಾತು ಜನಜನಿತ. ಅದರರ್ಥ 'ಹೊಸತು' ಸುದ್ದಿ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಮಾಧ್ಯಮಗಳೂ ಹೊರತಲ್ಲ. ಡೆಡ್‌ಲೈನ್ ಒತ್ತಡ ಮಾಧ್ಯಮದ ಸಿಬ್ಬಂದಿಯನ್ನೂ ಕಾಡುತ್ತಿದೆ. ವಸ್ತುಸ್ಥಿತಿಗಿಂತ ಸುದ್ದಿನೀಡುವ ಆತುರತೆಯೇ ಮುಖ್ಯವಾಗಿ ಸ್ಪಷ್ಟತೆ ಖಚಿತತೆಯಿಲ್ಲದ ವಿಷಯಗಳು ಪ್ರಸಾರವಾಗುತ್ತಿವೆ.

ಇವೆಲ್ಲವೂ ಸಾಮಾಜಿಕ, ಮಾನಸಿಕ ಆರೋಗ್ಯಕ್ಕೆ ಮಾರಕಗಳಾಗಿವೆ. ಪ್ರತಿನಿತ್ಯವೂ ಈ ಕುರಿತು ಪ್ರಸಾರವಾಗುವ ವರದಿಗಳಿಂದ ಜನರು ಮಾನಸಿಕವಾಗಿ, ದೈಹಿಕವಾಗಿ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಬಿತ್ತರಗೊಂಡ ಸುದ್ದಿಗಳಿಗೆ ಸಂಬಂಧಿಸಿ, ಮಾಹಿತಿ ಸಂಗ್ರಹಿಸಲು ಜನರಿಗೆ ನೆರವಾಗುವಲ್ಲಿ ಮಾಧ್ಯಮಗಳ ಪಾತ್ರ ಬಲು ದೊಡ್ಡದು. ಮಾಹಿತಿ ಕ್ರೋಡೀಕರಣದಲ್ಲಿ ಸಾಮಾಜಿಕ ಜಾಲತಾಣಗಳು ಪ್ರಮುಖ ಪಾತ್ರ ವಹಿಸುತ್ತಿವೆ.

**ಮುಖ್ಯ ಪದಗಳು**:- ಕೋವಿಡ್, ಮಾಧ್ಯಮಗಳು, ಪಾತ್ರ, ಸರ್ಕಾರ, ಸೃಷ್ಟಿ, ಸುದ್ದಿ ಮೂಗು, ಮಾನವೀಯ ಮೌಲ್ಯ. ಆನ್‌ಲೈನ್ ಕಲಿಕೆ:

**ಪೀಠಿಕೆ**:-

ಜಗತ್ತಿನ ಪ್ರತಿಯೊಂದು ಚರಾಚರ ಸೃಷ್ಟಿಗೂ ಸಂವಹನ ಅತಿ ಮುಖ್ಯ. ಪಶು, ಪಕ್ಷಿ, ಪ್ರಾಣಿ ಜಲಚರಗಳಷ್ಟೇ ಅಲ್ಲದೆ ಗಿಡಮರಗಳ ಮಧ್ಯೆಯೂ ಸಂವಹನ ನಿರಂತರವಾಗಿ ನಡೆಯುತ್ತಲೇ



Scanned with OKEN Scanner
Scanned with OKEN Scanner

ಪತ್ರಿಕೆಗಳನ್ನು ರೂಪಿಸುವಲ್ಲಿ ಮನುಷ್ಯನ ಶೋಧನಾ ದೃಷ್ಟಿ ಕಾರಣವಾಯಿತು. ಈ ನಿಟ್ಟಿನಲ್ಲಿ ಸದಾ ಕಾರ್ಯ ನಿರ್ವಹಿಸುತ್ತಿರುವ ಸಮೂಹ ಮಾಧ್ಯಮಗಳು ಜಗತ್ತಿನ ಎರಡು ಮಹಾಯುದ್ಧಗಳಂತಹ ಐತಿಹಾಸಿಕ ಘಟನೆಗಳನ್ನು ದಾಖಲಿಸುಲ್ಲಿ ಯಶಸ್ವಿಯಾಗಿವೆ. ಸಾಮಾಜಿಕ ಹೊಣೆಗಾರಿಕೆ ತೋರಬೇಕಾದ ಮಾಧ್ಯಮ ಸಂಸ್ಥೆಗಳು ಹಾಗೂ ಸಮೂಹ ಮಾಧ್ಯಮಗಳು ಆರೋಗ್ಯ ಕಾಳಜಿಯಂತಹ ವಿಷಯಗಳನ್ನು ಹೇಗೆ ವ್ಯಾಪಾರಿ ದೃಷ್ಟಿಯಿಂದ ನೋಡುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿ ಇಂದಿನ ಮಾಧ್ಯಮ ಇದೆ. ಕೋವಿಡ್-19 ನಂತಹ ಜಗತ್ತಿನ ತಲ್ಲಣಕ್ಕೆ ಕಾರಣವಾಗಿರುವ ಮಾರಕ ಸೋಂಕಿನ ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವಲ್ಲಿ ಯಶಸ್ಸು ಗಳಿಸಿವೆಯೇ ಎಂಬುದು ಬಹುದೊಡ್ಡ ಪ್ರಶ್ನೆಯಾಗಿದೆ.

ಆರಂಭದಲ್ಲಿ ಎಲ್ಲ ಬಗೆಯ ಐತಿಹಾಸಿಕ ಅರಿವನ್ನು ಮೂಡಿಸುವಲ್ಲಿ ಪಾತ್ರ ವಹಿಸಿರುವ ಸಮೂಹ ಮಾಧ್ಯಮಗಳು ಇತಿಹಾಸದಲ್ಲಿ ಜಗತ್ತನ್ನು ತಲ್ಲಣಗೊಲಿಸಿದ ಪ್ಲೇಗ್‌ನಂತಹ ಹತ್ತಾರು ಮಾರಣಾಂತಿಕ ಸೋಂಕುಗಳ ಬಗೆಗೂ ಅರಿವು ಮೂಡಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿವೆ. ಹಾಗೆಯೇ ಸಾಮಾಜಿಕ, ಕೌಟುಂಬಿಕ ಅರಿವು ಹಾಗೂ ಕುಟುಂಬದ ಒಳಗಿನ ಬಾಂಧ್ಯವದ ಅರಿವು ಮೂಡಿಸುವಲ್ಲಿ ಮಾಧ್ಯಮಗಳು ಸಹಕಾರಿಯಾಗಿವೆ. ಆದರೆ ಬರುಬರುತ್ತಾ ಮಾಧ್ಯಮ ವ್ಯವಹಾರಿಕ ಉದ್ಯಮವಾಗಿ ಪರಿಗಣಿಸಲ್ಪಟ್ಟಿದೆ.

ಜಗತ್ತು ತಲೆಕೆಳಗಾಗಿದೆ. ಕೋವಿಡ್-19 ಸೋಂಕು ಇಡೀ ಮಾನವ ಸಮೂಹವನ್ನು ಆತಂಕಕ್ಕೆ ದೂಡಿದೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ಅರಿವು ಮೂಡಿಸುವಲ್ಲಿ ಮಾಧ್ಯಮಗಳು ಸಾಕಷ್ಟು ನೆರವಾಗಿವೆ. ಸಾಮಾಜಿಕ ಜಾಲತಾಣಗಳು, ಚಿತ್ರರಂಗ, ದೂರದರ್ಶನ, ಆಕಾಶವಾಣಿಗಳ ಮೂಲಕ ಅರಿವು ಮೂಡಿಸುವ ಪ್ರಯತ್ನ ನಿರಂತರವಾಗಿ ಸಾಗುತ್ತಿದೆ. ಕನ್ನಡ ಪತ್ರಿಕೋದ್ಯಮ ಸವಾಲಿನ ಸ್ಥಿತಿಗೆ ಬಂದಿದೆ. ಕೆಲ ಮಾಧ್ಯಮ ಸಂಸ್ಥೆಗಳು ನಷ್ಟ ಅನುಭವಿಸುತ್ತಿದ್ದು ಮುಚ್ಚುವ ಹಂತ ತಲುಪಿವೆ. ಅದಕ್ಕೆ ಕಾರಣ ಈ ಕ್ಷೇತ್ರದಲ್ಲಿನ ಸ್ಪರ್ಧಾ ಮನೋಭಾವ ಸುಳ್ಳನ್ನು ಢಾಳಾಗಿ ಕಣ್ಣಿಗೆ ರಾಚುವಂತೆ ಪ್ರತಿಬಿಂಬಿಸುತ್ತಿವೆ. ನಮ್ಮಲ್ಲೇ ಮೊದಲು ಎನ್ನುವ ಮನೋಭಾವದಿಂದ ಬಳಲುತ್ತಿರುವ ಮಾಧ್ಯಮಗಳು ಸುಳ್ಳನ್ನು ಸತ್ಯವಾಗಿ, ಸತ್ಯವನ್ನು ಸುಳ್ಳಾಗಿ ಬಿಂಬಿಸುತ್ತಿವೆ. ತ್ವರಿತವಾಗಿ ಮಾಹಿತಿ ನೀಡುವ ಜೊತೆ ಜೊತೆಗೆ ಹಸಿ ಸುಳ್ಳು ಮಾಹಿತಿಯೂ ಜನರಿಗೆ ತಲುಪುತ್ತಿದೆ.

ಶತಮಾನದ ಹಿಂದೆ ಜಗತ್ತನ್ನು ತಲ್ಲಣಗೊಳಿಸಿದ ವೈರಾಣುವಿಗೆ ಮಿಲಿಯಗಟ್ಟಲೆ ಜನ ಮರಣ ಹೊಂದಿದರು ಆ ಹೊತ್ತಿನ ಮಾಧ್ಯಮ ಇವತ್ತಿನಷ್ಟು ಪರಿಣಾಮಕಾರಿಯಾಗಿ ಇಲ್ಲದಿರುವುದರಿಂದ ಮತ್ತು ಕೆಲ ದೇಶಗಳಲ್ಲಿ ಮಾಧ್ಯಮಗಳ ಮೇಲೆ ನಿಯಂತ್ರಣ ಇದ್ದುದರಿಂದ ಸೋಂಕಿನ ಬಗೆಗಿನ ಅರಿವು ಮೂಡಿಸುವಲ್ಲಿ ಅಲ್ಪಮಟ್ಟಿಗೆ ಪ್ರಯತ್ನಿಸಿದವು. ಆದರೆ ಪ್ರಸ್ತುತ ಸಂದರ್ಭದ ಹಾಗೆ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ ಎಂಬುದಂತೂ ಸತ್ಯ.

ಸಂವಿಧಾನದ ನಾಲ್ಕನೆ ಆಧಾರಸ್ತಂಭವೆಂದು ಕರೆಯಲ್ಪಟ್ಟಿರುವ ಮಾಧ್ಯಮವನ್ನು ಅಗತ್ಯ ಸೇವೆಯ ಅಡಿಯಲ್ಲಿ ಸೇರಿಸಲಾಗಿರುವ ಈ ಸಂದರ್ಭದಲ್ಲಿ ಮಾಧ್ಯಮಗಳ ಮಧ್ಯದಲ್ಲಿಯೇ ಜಿದ್ದಾಜಿದ್ದಿ ನಡೆಯುತ್ತಿದೆ. ಶತಮಾನದ ಹಿಂದಿನ ಸೋಂಕಿನ ಬಗ್ಗೆ ಬಾಯ್ಸ್‌ಸ್ಕೌಟ್ಸ್ ಮತ್ತು ಅಂಚೆ ಸಿಬ್ಬಂದಿ, ಶಿಕ್ಷಕರ ಮೂಲಕ ಮನೆ ಮನೆಗೆ ವಿಷಯ ತಲುಪಿಸಲಾಯಿತು. ಪ್ರಸ್ತುತ

ಸಂದರ್ಭದಲ್ಲಿ ಈ ರೀತಿಯ ಸೇವೆಯನ್ನು ನಿರೀಕ್ಷೆ ಮಾಡುವಂತೆಯೇ ಇಲ್ಲ. ಆಧುನಿಕ ತಂತ್ರಜ್ಞಾನ ಕರತಲಾಮಲಕ ಆಗಿರುವುದರಿಂದ ಮನೆಯಿಂದಲೇ, ಕುಳಿತಲ್ಲಿಂದಲೇ ಮಾಹಿತಿ ಲಭ್ಯವಾಗುತ್ತಿದೆ. ಪ್ರತಿದಿನದ ಸೋಂಕಿನ ಪ್ರಮಾಣ, ಸೋಂಕು ಹರಡುತ್ತಿರುವ ಬಗೆ, ತಜ್ಞರ ಅಭಿಪ್ರಾಯ, ಎಲ್ಲವೂ ಕ್ಷಣಮಾತ್ರದಲ್ಲಿಯೇ ಲಭ್ಯವಾಗುತ್ತಿವೆ.


Scanned with OKEN Scanner
Scanned with OKEN Scanner

ISSN: 2581-8511 Volume-5(Special Issue 1)2022

ಇಂದು ಕೋಟ್ಯಂತರ ಜನ ಸಾಮಾಜಿಕ ಜಾಲತಾಣವನ್ನು ಬಳಸಿಕೊಳ್ಳುವ ಮೂಲಕ ಜಾಗೃತಿಯನ್ನು ಪಡೆಯುತ್ತಿದ್ದಾರೆ. ಸೋಂಕು ಹರಡದದಂತೆ ತಡೆಗಟ್ಟಲು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕೆನ್ನುವ ಅರಿವು ಕೆಲ ತಿಂಗಳ ಹಿಂದೆ ಯಾರಿಗು ತಿಳಿದಿರಲಿಲ್ಲ. ಆದರೆ ಇಂದು ಇದರ ಬಗ್ಗೆ ಬಹುತೇಕ ಜನರಿಗೆ ತಿಳಿಯುವಲ್ಲಿ ಮಾಧ್ಯಮಗಳ ಪಾತ್ರ ಬಹುದೊಡ್ಡದು. ಕ್ವಾರಂಟೈನ್, ಸೋಷಿಯಲ್ ಡಿಸ್ಟೆನ್ಸಿಂಗ್, ಸ್ಯಾನಿಟೈಸರ್, ಕಂಟೈನ್‌ಮೆಂಟ್ ಝೋನ್, ಲಾಕ್‌ಡೌನ್, ಸೀಲ್‌ಡೌನ್, ಮುಂತಾದ ಶಬ್ದಗಳು ಗ್ರಾಮೀಣ ಪ್ರದೇಶದ ಅನಕ್ಷರಸ್ಥರ ಬಾಯಲ್ಲೂ ರಾರಾಜಿಸುತ್ತಿವೆ.

ಕೋವಿಡ್ ಕಾರಣದಿಂದ ಇಡೀ ದೇಶವನ್ನು ಸುಮಾರು ಎರಡು ತಿಂಗಳಷ್ಟು ದೀರ್ಘಕಾಲ ಇದೇ ಮೊದಲಬಾರಿಗೆ ಲಾಕ್‌ಡೌನ್ ಮಾಡಲಾದ ಸಂಗತಿಯೂ ಮಾಧ್ಯಮಗಳ ಮೂಲಕವೇ ಜನರಿಗೆ ತಲುಪಿತು. ಮಾರ್ಚ್ 22ರಂದು ಸಾಂಕೇತಿಕವಾಗಿ ಲಾಕ್‌ಡೌನ್ ಘೋಷಣೆ ಮಾಡಿ, ನಂತರ ಮಾರ್ಚ್ 24ರ ರಾತ್ರಿಯಿಂದ ಇಡೀ ದೇಶವನ್ನು 21 ದಿನಗಳ ಲಾಕ್‌ಡೌನ್ ಮಾಡಲಾಯಿತು. ನಂತರ ಒಟ್ಟು ನಾಲ್ಕು ಹಂತಗಳಲ್ಲಿ ಲಾಕ್‌ಡೌನ್ ಮುಂದುವರೆದು ಸುಮಾರು 2 ತಿಂಗಳ ಕಾಲ ಇಡೀ ದೇಶವನ್ನು ಲಾಕ್‌ಡೌನ್‌ಗೆ ಒಳಪಡಿಸಿದ್ದು ಐತಿಹಾಸಿಕ ದಾಖಲೆಯೇ ಸರಿ.

**ಮಾಧ್ಯಮದ ಹೊಣೆಗಾರಿಕೆ:**

ನಾಯಿ ಮನುಷ್ಯನನ್ನು ಕಚ್ಚಿದರೆ ಸುದ್ದಿಯಲ್ಲ, ಮನುಷ್ಯ ನಾಯಿಯನ್ನು ಕಚ್ಚಿದರೆ ಅದು ಸುದ್ದಿ ಎಂಬ ಮಾತು ಜನಜನಿತ. ಅದರರ್ಥ 'ಹೊಸತು' ಸುದ್ದಿ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಜನರಲ್ಲಿ ಆಸಕ್ತಿ ಕೆರಳಿಸುವ ಹತ್ತಾರು ಸಂಗತಿಗಳು ಸುದ್ದಿಗಳೇ. ಗಂಡ ಹೆಂಡತಿಯ ನಡುವಿನ ಬೀದಿ ಜಗಳ, ಗರ್ಭಿಣಿಯೊಬ್ಬಳು ಏಕಕಾಲದಲ್ಲಿ ನಾಲ್ಕೈದು ಮಕ್ಕಳಿಗೆ ಜನ್ಮ ನೀಡುವುದು. ಜಗತ್ತಿನ ಪ್ರಮುಖ ವ್ಯಕ್ತಿಗಳ ಲೈಂಗಿಕ ಹಗರಣಗಳು, ಉಗ್ರರಿಂದಾದ ದಮನಕಾರಿ ಘಟನೆಗಳು, ಪ್ರಕೃತಿ ವಿಕೋಪಗಳು-ಇವೆಲ್ಲವೂ ಸಹಜವಾಗಿಯೇ ಮನುಷ್ಯನ ಆಸಕ್ತಿಯನ್ನು ಕೆರಳಿಸುತ್ತವೆ. ಹಾಗೆಂದು ಪತ್ರಕರ್ತರಾದವರು ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯುವಂತಿಲ್ಲ. ವ್ಯವಹಾರ ಜ್ಞಾನ, ಭಾಷೆಯ ಮೇಲಿನ ಹಿಡಿತ, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ರೂಪಿಸಿಕೊಂಡವರು ಉತ್ತಮ ಪತ್ರಕರ್ತರೆನಿಸಿಕೊಳ್ಳುತ್ತಾರೆ.

ಪ್ರತಿಯೊಬ್ಬ ವರದಿಗಾರನಿಗೂ 'ನೋಸ್ ಫಾರ್ ನ್ಯೂಸ್'(ಸುದ್ದಿ ಮೂಗು) ಇದ್ದು, ಬರೆಯುವ ವಿಷಯ ಕುರಿತು ಸರಿತಪ್ಪುಗಳ ವಿವೇಚನೆ ಇರಬೇಕು. ಆಲೋಚನೆ ಬರವಣಿಗೆ ಸ್ಪಷ್ಟವಾಗಿದ್ದು ಗೊಂದಲ ಮೂಡಿಸುವಂತೆ ಇರಬಾರದು. ವೈಯಕ್ತಿಕತೆ, ಅಥವಾ ವ್ಯಕ್ತಿನಿಷ್ಠತೆಗೆ ಅವಕಾಶವಿರದೆ ವಸ್ತುನಿಷ್ಠತೆಯಿಂದ, ನಿಖರತೆ ಕಾಪಾಡಿಕೊಳ್ಳಬೇಕು. ಸದಾ ಜಾಗೃತನಾಗಿದ್ದು, ಜನರ ಜಾಗೃತಿಗೂ ಕಾರಣನಾಗಬೇಕು. ಎಂತಹದ್ದೇ ದಾರುಣ ಸನ್ನಿವೇಶವಿದ್ದರೂ ಸ್ತಿಮಿತ ಕಳೆದುಕೊಳ್ಳಬಾರದು. ಜನರ ಕುತೂಹಲಕ್ಕೆ ಕಾರಣವಾಗಬೇಕೆ ಹೊರತು, ಭೀತಿ ಮೂಡಿಸಬಾರದು. ಇಂದು ಜಗತ್ತಿನ ಆತಂಕಕ್ಕೆ ಕಾರಣವಾಗಿರುವ ಕೋವಿಡ್‌ನಂತಹ ಮಾರಕ ಸೋಂಕಿನ ಸಂದರ್ಭದಲ್ಲಿಯೂ ಮಾಧ್ಯಮಗಳು ಈ ಹೊಣೆಗಾರಿಕೆಯನ್ನು ಮರೆಯಬಾರದು.

ಪ್ರಸ್ತುತ ಸಂದರ್ಭದಲ್ಲಿ ಮಾಧ್ಯಮಗಳಿಂದ ಈ ಕಾಳಜಿ ನಿರೀಕ್ಷೆ ಮಾಡಲು ಸಾಧ್ಯವೇ ಎಂಬುದು ಈ ಹೊತ್ತಿನ ಬಹುದೊಡ್ಡ ಪ್ರಶ್ನೆ. ಏಕೆಂದರೆ ಅನೇಕ ಮಾಧ್ಯಮಗಳು ಸುದ್ದಿ ನೀಡುವಲ್ಲಿ ತೋರುವ ಆತುರ, ಸುದ್ದಿಯ ಖಚಿತತೆಯಲ್ಲಿ ತೋರುತ್ತಿಲ್ಲ. ಕೊರೊನಾ ಕಾಲದಲ್ಲಂತೂ ಸುದ್ದಿಗಳು ಏಕಪಕ್ಷೀಯವಾಗಿ ನಿರೂಪಿತವಾಗುತ್ತಿವೆ. ಪ್ರಭುತ್ವದ ಅಡಿಯಾಳುಗಳಂತೆ ವರ್ತಿಸುತ್ತಿರುವ ಮಾಧ್ಯಮಗಳು ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಬದಲು ಧಾರ್ಮಿಕ ಒಡಕನ್ನು ಮೂಡಿಸುವಲ್ಲಿ ಹೆಚ್ಚು ಆಸಕ್ತಿ ವಹಿಸಿವೆ.


Scanned with OKEN Scanner
Scanned with OKEN Scanner

ಇಂತಹ ಮನೋಭಾವಕ್ಕೆ ಮಾಧ್ಯಮಗಳನ್ನು ಪ್ರತಿನಿಧಿಸುವವರೆಲ್ಲರೂ ಬಹುತೇಕ ಏಕಪಕ್ಷೀಯ ಅಥವಾ ಏಕವ್ಯಕ್ತಿ ಆರಾಧಕರಾಗಿರುವುದು ಕಾರಣವಾಗಿದೆ. ಕೊರೋನಾ ವಿಷಯ ನಿರೂಪಣೆಯೂ ಇಂದು ಮನರಂಜನೆಯಾಗಿದೆ. ಯಾವುದೇ ಸುದ್ದಿಯಾಗಲೀ ಮನರಂಜನಾ ದೃಷ್ಟಿಕೋನದಲ್ಲಿ ನೀಡಬೇಕು ಎಂಬುದು ಮಾಧ್ಯಮದ ನಿಲುವಾಗಿದೆ. ನಿರೂಪಕರ ಅತಿಯಾದ ಅರಚಾಟ(ಕೂಗುಮಾರಿಗಳು) ವೀಕ್ಷಕರನ್ನು ಭಯಭೀತರನ್ನಾಗಿಸುವ ಪರಿಪಾಠ ಹೆಚ್ಚುತ್ತಿದೆ. ಇತ್ತೀಚೆಗಂತೂ ಸುದ್ದಿಗಳನ್ನು ಯಾವ ರೀತಿ ಬರೆಯಬೇಕು, ಬರೆಯಬಾರದು ಎಂದು ಸುದ್ದಿಯ ಪ್ರಾಯೋಜಕರು ನಿರ್ದೇಶಿಸುವ ಮಟ್ಟಿಗೆ ಪತ್ರಕರ್ತ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಒಂದು ರೀತಿಯ ಜೀತದಾಳಿನಂತೆ ಉದ್ಯೋಗ ಮಾಡಬೇಕಾಗಿರುವುದು ಇಂದಿನ ದುರಂತ.

**ಮಾಧ್ಯಮದ ಇತ್ಯಾತ್ಮಕ ಪ್ರಭಾವ**

- ಸರ್ಕಾರಕ್ಕೆ ಎಚ್ಚರಿಕೆ ಘಂಟೆ: ಕೋವಿಡ್‌ನಿಂದ ಸಂತ್ರಸ್ತರಾಗಿರುವ ದೇಶದ ಕಾರ್ಮಿಕರು ತಮ್ಮ ತಮ್ಮ ಸ್ವಗ್ರಾಮಗಳಿಗೆ ತೆರಳುವ ಸಂದರ್ಭದಲ್ಲಿ ದೇಶದ ಬಹುತೇಕ ಮಾಧ್ಯಮಗಳು ಈ ಕುರಿತು ಪ್ರತಿನಿತ್ಯವೂ ವರದಿಗಳನ್ನು ಮಾಡುತ್ತಾ, ವಸ್ತುಸ್ಥಿತಿಯನ್ನು ವಿವರಿಸುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಗಳಾಗಿವೆ. ಕಾರ್ಮಿಕರು ತೆರಳುವ ಸಮಯದಲ್ಲಿ ಅನುಭವಿಸುವ ಹಸಿವಿನ ತೊಳಲಾಟ, ಆರೋಗ್ಯ ಸಮಸ್ಯೆಗಳು, ದಾರಿ ಮಧ್ಯೆ ಅನುಭವಿಸುವ ಸಂಕಟಗಳನ್ನು ಬಿಂಬಿಸುವ ಜೊತೆಯಲ್ಲಿಯೇ ವಲಸೆ ಕಾರ್ಮಿಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗದ ಸರ್ಕಾರಗಳ ನಿರ್ಲಕ್ಷ್ಯತನವನ್ನು ಯಾವುದೇ ಹಿಂಜರಿಕೆಯಿಲ್ಲದೆ ತೋರುತ್ತಿರುವುದು. ಆ ಮೂಲಕ ವಲಸೆ ಕಾರ್ಮಿಕರಿಗೆ ಒಂದಿಷ್ಟಾದರೂ ನೆರವು ಕಲ್ಪಿಸುವ ಆಶಾಭಾವನೆ ಮೂಡಿಸುತ್ತಿವೆ. ಇತ್ತೀಚೆಗೆ ಸಾವಿರಾರು ಕಾರ್ಮಿಕರು, ಸಾವಿರಾರು ಕಿ.ಮೀ. ದೂರವನ್ನು ಸೂಕ್ತ ವ್ಯವಸ್ಥೆ ಇಲ್ಲದೆ ನಡೆದೇ ಹೊರಟಿದ್ದು ಅತ್ಯಂತ ದುರಂತಮಯ ಸಂಗತಿ. ಈ ಸಂದರ್ಭದಲ್ಲಿ ಮಾಧ್ಯಮಗಳ ಪಾತ್ರ ಗಣನೀಯ.

- ಸಾಮಾಜಿಕ ಅರಿವು: ಸಮಾಜ ಮತ್ತು ಜನ ಸಮುದಾಯಗಳು ಪರಸ್ಪರ ನಂಟು ಹೊಂದಿವೆ. ಸಮಾಜದ ಮಧ್ಯದಲ್ಲಿಯೇ ಕಾರ್ಯನಿರ್ಹಸುವ ಮಾಧ್ಯಮಗಳು ಸಮಾಜ ಮತ್ತು ಜನರ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಯಾವುದೇ ವಿಷಯವಾಗಿರಲಿ ಜನರಿಗೆ ತಿಳಿಯುವುದು ಮಾಧ್ಯಮದ ಮೂಲಕವೇ. ಕೋವಿಡ್‌ನಂತಹ ಮಾರಣಾಂತಿಕ ಸೋಂಕು ಇಡೀ ಜಗತ್ತನ್ನು ತಲ್ಲಣಗೊಳಿಸುತ್ತಿರುವ ಈ ಹೊತ್ತಿನಲ್ಲೂ ಜನರಲ್ಲಿ ಅರಿವು ಮೂಡಿಸುವಲ್ಲಿ ಮಾಧ್ಯಮ ಪಾತ್ರ ಬಹು ದೊಡ್ಡದು. ಇತ್ಯಾತ್ಮಕವಾಗಿರಲಿ, ನೇತ್ಯಾತ್ಮಕವಾಗಿರಲಿ ಒಟ್ಟಾರೆ ಮಾಧ್ಯಮಗಳೇ ಈ ಹೊತ್ತಿನ ಕೊಂಡಿಯಾಗಿವೆ.

- ಕೊರೋನ ವಾರಿಯರ್ಸ್: ದೇಶ ಕಾಯುವ ಯೋಧರ ಹಾಗೆಯೇ ಕೋವಿಡ್ ಸೋಂಕಿನ ವಿರುದ್ಧ ನಿತ್ಯವೂ ಹೋರಾಡುತ್ತಿರುವ ಸಿಬ್ಬಂದಿಯನ್ನು ಕೊರೊನಾ ವಾರಿಯರ್ಸ್ ಎಂದು ಗುರುತಿಸಲಾಗಿದೆ. ವೈದ್ಯರು, ಆರೋಗ್ಯ ಕಾರ್ಯಕರ್ತರು, ಪೊಲೀಸ್ ಸಿಬ್ಬಂದಿ, ಆಶಾ ಕಾರ್ಯಕರ್ತರು, ಮಾಧ್ಯಮ ಸಿಬ್ಬಂದಿಗಳು ಯೋಧರಂತೆ ಬಿಂಬಿತರಾಗುತ್ತಿದ್ದಾರೆ. ಇವರೆಲ್ಲರು ಸಲ್ಲಿಸುವ ಸೇವೆ, ಸೋಂಕಿನ ವಿರುದ್ಧ ಹೋರಾಡುತ್ತಿರುವ ರೀತಿ, ರೋಗಿಗಳಿಗೆ ನೀಡುತ್ತಿರುವ ನೆರವು, ಪೊಲೀಸ್ ಸಿಬ್ಬಂದಿಯ ಕಾರ್ಯತತ್ಪರತೆ ಮುಂತಾದವುಗಳನ್ನು ಮಾಧ್ಯಮಗಳು ಧನಾತ್ಮಕವಾಗಿ ಬಿಂಬಿಸುತ್ತಾ ಸರ್ಕಾರಕ್ಕೆ ಸೂಕ್ತ ಮಾಹಿತಿ ತಲುಪಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿವೆ.

- ಆರೋಗ್ಯ ಕಾಳಜಿ: ಪತ್ರಿಕೆ, ದೂರದರ್ಶನದಂತಹ ಮಾಧ್ಯಮಗಳು ರಾಜಕಾರಣವನ್ನೇ ಪ್ರಮುಖವಾಗಿ ಬಿಂಬಿಸಿದರೂ ಜೊತೆ ಜೊತೆಗೆ ಆರೋಗ್ಯ, ಸಾಂಸ್ಕೃತಿಕ, ಕ್ರೀಡೆ, ಅಂತಾರಾಷ್ಟ್ರೀಯ ವಿಷಯಗಳ ಕುರಿತು ಪ್ರತಿದಿನವೂ ಮಾಹಿತಿ ನೀಡುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಮಾಧ್ಯಮಗಳೂ


Scanned with OKEN Scanner
Scanned with OKEN Scanner

ಉಳಿದ ವಿಷಯಗಳನ್ನು ಗೌಣವಾಗಿಸಿ, ರಾಜಕಾರಣ, ಮತ್ತು ಆರೋಗ್ಯ ಕ್ಷೇತ್ರವನ್ನು ಪ್ರಮುಖವಾಗಿ ಬಿಂಬಿಸುತ್ತಿವೆ. ಮಾರಕ ಸೋಂಕು ಕೋವಿಡ್ ಕುರಿತ ವಿಷಯ ಪ್ರಸ್ತುತಿಯ ಜೊತೆಗೆ ಜನರ ಆರೋಗ್ಯ ಕುರಿತು ಅರಿವು ಮೂಡಿಸುತ್ತಿವೆ. ಸಾಮಾಜಿಕ ಅಂತರ ಎಷ್ಟಿರಬೇಕು ಎನ್ನುವುದರಿಂದ ಹಿಡಿದು ಆರೋಗ್ಯಕರ ಆಹಾರ ಸೇವನೆ, ಜೀವನಶೈಲಿ, ಸ್ವಚ್ಛತೆ, ರೋಗನಿರೋಧಕ ಶಕ್ತಿ ಹೆಚ್ಚಳಕ್ಕೆ ಯಾವ ಕ್ರಮ ಅನುಸರಿಸಬೇಕು, ಒತ್ತಡವನ್ನು ನಿಭಾಯಿಸುವುದು ಹೇಗೆ ಎಂಬುದರ ಕುರಿತು ತಜ್ಞರೊಂದಿಗೆ ಸಮಾಲೋಚನೆ ಹೀಗೆ ಹತ್ತಾರು ಮಾಹಿತಿಗಳನ್ನು ಜನರಿಗೆ ತಲುಪಿಸಿ ಆರೋಗ್ಯ ಕಾಳಜಿ ಮೂಡಿಸುತ್ತಿವೆ. ಈ ಎಲ್ಲ ಸಂಗತಿಗಳು ಜನರಿಗೆ ಕುಳಿತ ಸ್ಥಳದಲ್ಲೇ ಲಭಿಸುತ್ತಿವೆ.

- ಮಾಹಿತಿ ಕ್ರೋಡೀಕರಣ: ಬಿತ್ತರಗೊಂಡ ಸುದ್ದಿಗಳಿಗೆ ಸಂಬಂಧಿಸಿ, ಮಾಹಿತಿ ಸಂಗ್ರಹಿಸಲು ಜನರಿಗೆ ನೆರವಾಗುವಲ್ಲಿ ಮಾಧ್ಯಮಗಳ ಪಾತ್ರ ಬಲು ದೊಡ್ಡದು. ಮಾಹಿತಿ ಕ್ರೋಡೀಕರಣದಲ್ಲಿ ಸಾಮಾಜಿಕ ಜಾಲತಾಣಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಫೇಸ್‌ಬುಕ್‌ನಂತಹ ಜಾಲತಾಣಗಳ ಮೂಲಕ ಚರ್ಚಾ ಕಾರ್ಯಕ್ರಮಗಳು ನೇರವಾಗಿ ಪ್ರಸಾರಗೊಳ್ಳುತ್ತಿವೆ. ದೂರದರ್ಶನಗಳಲ್ಲಿ ನೇರ ಸಂವಾದ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಇವೆಲ್ಲವೂ ವಿಷಯ ಕುರಿತು ಅರಿವು ಮೂಡಿಸುತ್ತಿವೆ.

- ಮನೆಯಲ್ಲೇ ಮನರಂಜನೆ: ಆಧುನಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ಸಾಮಾಜಿಕ ಜಾಲತಾಣಗಳು ಜನ ಸಮುದಾಯದ ನಡುವಿನ ಕೊಂಡಿಯಾಗಿವೆ. ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಅದ್ದೂರಿ ಮದುವೆಗಳು, ಸಿನಿಮಾ ಥಿಯೇಟರ್‌ಗಳು ಒಟ್ಟಾರೆ ಜನ ಒಂದೆಡೆ ಸೇರಲು ಕಾರಣವಾಗುವ ಎಲ್ಲ ಸಮಾರಂಭಗಳು ರದ್ದುಗೊಂಡಿರುವುದರಿಂದ ಜಾಲತಾಣಗಳೇ ಮನರಂಜನಾ ಮಾಧ್ಯಮಗಳಾಗಿವೆ. ಒಟಿಟಿ ಪ್ಲಾಟ್‌ಫಾರ್ಮ್‌ಗಳಾದಂತಹ, ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಝೀ5, ಡಿಸ್ನಿ+ಹಾಟ್‌ಸ್ಟಾರ್, ವೂಟ್ ಗಳು ಮನೆಯಲ್ಲೇ ಜನರಿಗೆ ಮನರಂಜನೆ ಒದಗಿಸುತ್ತಿವೆ.

- ಆನ್‌ಲೈನ್ ಕಲಿಕೆ: ಶಿಕ್ಷಣ ಕ್ಷೇತ್ರ ಸಂಪೂರ್ಣ ಸ್ಥಗಿತಗೊಂಡಿರುವ ಪ್ರಸ್ತುತ ಸಂದರ್ಭದಲ್ಲಿ ಆನ್‌ಲೈನ್ ಕಲಿಕೆಗೆ ಅವಕಾಶಗಳು ಹೆಚ್ಚಾಗಿವೆ. ಖಾಸಗಿ ವಾಹಿನಿಗಳು ಹೆಚ್ಚಾಗಿ ಕೋವಿಡ್ ಸಂಬಂಧಿತ ವಿಷಯಗಳಿಗೇ ಸೀಮಿತಗೊಂಡರೂ ಸರ್ಕಾರದ ಅಧೀನದಲ್ಲಿರುವ ಚಂದನ, ಆಕಾಶವಾಣಿಗಳಲ್ಲಿ ಆನ್‌ಲೈನ್ ಶಿಕ್ಷಣದ ನೇರಪ್ರಸಾರ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಸುಲಭವಾಗಿ ಲಭ್ಯವಾಗುತ್ತಿವೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ವಿಚಾರಗೋಷ್ಠಿಗಳು ವಿಚಾರಸಂಕಿರಣಗಳ ಜಾಗದಲ್ಲಿ ವೆಬಿನಾರ್‌ಗಳು ಆನ್‌ಲೈನ್‌ಗಳಲ್ಲಿ ನಡೆಯುತ್ತಿವೆ.

- ನೂತನ ಅನ್ವೇಷಣೆ: ಆಹಾರ ಪದ್ಧತಿ, ಕರಕುಶಲ ಮುಂತಾದ ಚಟುವಟಿಕೆಗಳ ಕಲಿಕೆಗೆ ಜನರು ಸಾಮಾಜಿಕ ಜಾಲತಾಣವನ್ನು ಅವಲಂಬಿಸಿದ್ದಾರೆ, ಹೊಸ ಬಗೆಯ ರುಚಿ, ಮಾಡುವ ವಿಧಾನ, ತಯಾರಿಸಿದ ನಂತರ ಜಾಲತಾಣದಲ್ಲಿ ಹಂಚಿಕೊಳ್ಳುವುದು ಆ ಮೂಲಕ ಸ್ನೇಹವಲಯ ವಿಸ್ತರಿಸಿಕೊಳ್ಳುವುದು ಎಲ್ಲವೂ ಸಾಧ್ಯವಾಗುತ್ತಿರುವುದು ಜನರ ಪರಸ್ಪರ ಸಹಕಾರ ಮತ್ತು ಅನ್ವೇಷಣಾ ಮನೋಭಾವದಿಂದ. ಹೀಗಾಗಿ ಮನೆಗಳು ಹೊಸ ಕಲಿಕಾ ಕೇಂದ್ರಗಳಾಗಿವೆ.

**ನೇತ್ಯಾತ್ಮಕ ಪ್ರಭಾವ**

- ಅಸಮರ್ಪಕ ಮಾಹಿತಿ ನೀಡುವಿಕೆ: ಹತ್ತಾರು ಪತ್ರಿಕೆಗಳೂ, ಹತ್ತಾರು ದೂರದರ್ಶನ ಖಾಸಗಿ ವಾಹಿನಿಗಳು ಇರುವ ಪ್ರಸ್ತುತ ಸಂದರ್ಭದಲ್ಲಿ ಸಮೂಹ ಮಾಧ್ಯಮಗಳ ಮಧ್ಯೆ ಜಿದ್ದಾಜಿದ್ದಿ ಏರ್ಪಟ್ಟಿದೆ, ನಮ್ಮಲ್ಲಿಯೇ ಮೊದಲು ಎಂಬ ಕ್ರೆಡಿಟ್‌ಗಾಗಿ ಖಾಸಗಿ ವಾಹಿನಿಗಳು ಹೊಡೆದಾಡುತ್ತಿವೆ. ಇದರ ಮಧ್ಯೆ ಟಿಆರ್‌ಪಿ ಎಂಬ ಪೆಡಂಭೂತ ಎಲ್ಲ ಮಾಧ್ಯಮಗಳನ್ನೂ ಮೆಟ್ಟಿದೆ. ಅಸ್ತಿತ್ವದ ಪ್ರಶ್ನೆ, ಪತ್ರಿಕೆ, ವಾಹಿನಿಗಳಿಗೆ ಸವಾಲಾಗಿದೆ. ಈ ಹೋರಾಟದ ನಡುವೆ ನಿಜವೋ ಸುಳ್ಳೋ ಎಂದು ಸುದ್ದಿಯನ್ನು



Scanned with OKEN Scanner
Scanned with OKEN Scanner

ಖಚಿತಪಡಿಸಿಕೊಳ್ಳುವ ಮನಸ್ಥಿತಿ ಇಲ್ಲವಾಗಿದೆ. ಹೀಗಾಗಿ ಸುಳ್ಳು ಅಥವಾ ಅಸಮರ್ಪಕ ಮಾಹಿತಿ ಪ್ರಸಾರ ಹೆಚ್ಚಾಗುತ್ತಿರುವುದು ಕಂಡುಬರುತ್ತಿದೆ.

- ಸಾಮಾಜಿಕ ಆರೋಗ್ಯಕ್ಕೆ ಮಾರಕ: ಇಡೀ ಜನಸಮುದಾಯ ತಲ್ಲಣಗೊಂಡಿರುವ ಸಂದರ್ಭದಲ್ಲಿ ಸಹಜವಾಗಿಯೇ ಆರೋಗ್ಯ ಸಮಸ್ಯೆ ಎಲ್ಲೆಡೆಯೂ ಕಾಡುತ್ತಿದೆ. ಇದಕ್ಕೆ ಮಾಧ್ಯಮಗಳೂ ಹೊರತಲ್ಲ. ಡೆಡ್‌ಲೈನ್ ಒತ್ತಡ ಮಾಧ್ಯಮದ ಸಿಬ್ಬಂದಿಯನ್ನೂ ಕಾಡುತ್ತಿದೆ. ವಸ್ತುಸ್ಥಿತಿಗಿಂತ ಸುದ್ದಿನೀಡುವ ಆತುರತೆಯೇ ಮುಖ್ಯವಾಗಿ ಸ್ಪಷ್ಟತೆ ಖಚಿತತೆಯಿಲ್ಲದ ವಿಷಯಗಳು ಪ್ರಸಾರವಾಗುತ್ತಿವೆ. ಇವೆಲ್ಲವೂ ಸಾಮಾಜಿಕ, ಮಾನಸಿಕ ಆರೋಗ್ಯಕ್ಕೆ ಮಾರಕಗಳಾಗಿವೆ. ಪ್ರತಿನಿತ್ಯವೂ ಈ ಕುರಿತು ಪ್ರಸಾರವಾಗುವ ವರದಿಗಳಿಂದ ಜನರು ಮಾನಸಿಕವಾಗಿ, ದೈಹಿಕವಾಗಿ ಒತ್ತಡಕ್ಕೆ ಸಿಲುಕುತ್ತಿದ್ದಾರೆ.

- ಉದ್ಯೋಗ ನಷ್ಟ: ಕೋವಿಡ್19 ಆತಂಕದ ನಡುವೆ ಸಾಮಾಜಿಕ, ಔದ್ಯೋಗಿಕ ಸ್ಥಾನಪಲ್ಲಟಕ್ಕೆ ದಾರಿಮಾಡಿಕೊಟ್ಟಿದೆ. ಕೋಟ್ಯಧಿಪತಿಗಳು ಲಕ್ಷಾಧಿಪತಿಗಳಾಗಿದ್ದಾರೆ. ಉದ್ಯಮಪತಿಗಳು ಬೀದಿಗೆ ಬರುತ್ತಿದ್ದಾರೆ. ಖಾಸಗಿ ಉದ್ಯೋಗರಂಗ ತೀವ್ರ ಸಂಕಷ್ಟಕ್ಕೆ ಒಳಗಾಗಿದೆ. ಉಳಿದ ಕ್ಷೇತ್ರಗಳ ಹಾಗೆಯೇ ಮಾಧ್ಯಮ ಕ್ಷೇತ್ರದಲ್ಲಿಯೂ ಉದ್ಯೋಗ ನಷ್ಟ ಅನುಭವಿಸುತ್ತಿದೆ. ಮಾಧ್ಯಮ ಸಿಬ್ಬಂದಿ ಕೆಲಸ ಕಳೆದುಕೊಳ್ಳುವ ಭೀತಿ ಎದುರಿಸುತ್ತಿರುವುದಷ್ಟೇ ಅಲ್ಲದೆ, ಅನೇಕ ಮಾಧ್ಯಮ ಸಂಸ್ಥೆಗಳು ಸಿಬ್ಬಂದಿಯನ್ನು ಮನೆಗೆ ಕಳುಹಿಸುತ್ತಿರುವ ವಿಷಯಗಳೂ ಹೊರಬರುತ್ತಿವೆ. ಸಹಜವಾಗಿಯೇ ಉದ್ಯೋಗನಷ್ಟದ ಭೀತಿ ಎದುರಿಸುತ್ತಿರುವ ಮಾಧ್ಯಮ ಸಿಬ್ಬಂದಿ, ಸರಿಯೋ ತಪ್ಪೋ ಎಂದು ಕಂಡುಕೊಳ್ಳುವ ಮನಸ್ಥಿತಿಯನ್ನು ಕಳೆದುಕೊಂಡು ಆತುರಕ್ಕೆ ಒಳಗಾಗಿ ಸುದ್ದಿ ನೀಡುತ್ತಿದ್ದಾರೆ. ಜನರಲ್ಲಿ ಭೀತಿ ಹುಟ್ಟಿಸುತ್ತಿದ್ದಾರೆ. ಇದನ್ನು ಓದುವ, ಕೇಳುವ, ನೋಡುವ ಜನರು ಭ್ರಮೆಯಲ್ಲಿ ಬದುಕುವಂತಾಗಿದೆ.

- ನಮ್ಮಲ್ಲೇ ಮೊದಲು ಎನ್ನುವ ಹಪಾಹಪಿ: ಯಾವುದಾದರೂ ಒಂದು ಸಂಗತಿ ತಿಳಿದರೆ ಅದರ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಿ, ಸುದ್ದಿಯ ಮೂಲ ಸುಳ್ಳೋ ನಿಜವೋ ಎಂದು ಪರಿಶೀಲಿಸಿ, ಅದನ್ನು ಏಕಮುಖವಾಗಿ ನೋಡದೆ, ಸಾಧಕ ಬಾಧಕಗಳೆರಡನ್ನೂ ಪರಿಗಣಿಸಿ ಅದನ್ನು ಸುದ್ದಿಯನ್ನಾಗಿಸುವುದು ಪತ್ರಕರ್ತನ ಆದ್ಯ ಕರ್ತವ್ಯ ಎಂಬುದು ಪತ್ರಿಕೋದ್ಯಮ ಕಲಿಯಲು ಬರುವವರಿಗೆ ಇರುವ ಮೊದಲ ಪಾಠ ಅಥವಾ ನಿಯಮ ಎಂದರೂ ಸರಿಯೇ. ಆದರೆ ಇದನ್ನು ಎಷ್ಟು ಜನ ಅಥವಾ ಎಷ್ಟು ಮಾಧ್ಯಮ ಸಂಸ್ಥೆಗು ಅನುಸರಿಸುತ್ತಿವೆ ಎಂದು ನೋಡಿದರೆ, ಶೇ.80ರಷ್ಟು ಸುದ್ದಿಗಳು ಅತ್ತ ಸಂಪೂರ್ಣ ನಿಜವೂ ಅಲ್ಲದ, ಇತ್ತ ಸಂಪೂರ್ಣ ಸುಳ್ಳೂ ಅಲ್ಲದ ಅಡ್ಡಗೋಡೆಯ ಮೇಲೆ ದೀಪ ಇಟ್ಟ ವಿಷಯಗಳೇ ಅಗಿರುವುದು ಇಂದಿನ ಮಾಧ್ಯಮಗಳ ದುರಂತ.

- ಪ್ರಸ್ತುತ ಕೋವಿಡ್ ಸೋಂಕು ಕುರಿತ ಸುದ್ದಿಗಳೂ ಈ ಮಾದರಿಯವೇ ಆಗಿವೆ. ಕೋವಿಡ್‌ನಂತಹ ಮಾರಕ ಸೋಂಕಿನ ಬಗ್ಗೆ ಪ್ರತಿದಿನ ಒಂದುಬಾರಿ ಇಲ್ಲವೇ ಎರಡು ಬಾರಿ ವಿವರ ನೀಡಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದ್ದರೂ ಅದನ್ನು ಯಾವ ಮಾಧ್ಯಮಗಳೂ ಅನುಸರಿಸುತ್ತಿಲ್ಲ. ಆ ದಿನದ ಸೋಂಕಿನ ಕುರಿತು ಆರೋಗ್ಯ ಇಲಾಖೆ ಅಧಿಕೃತ ವರದಿ ಬಿಡುಗಡೆ ಮಾಡಿದ ನಂತರವೇ ವರದಿ ಮಾಡಬೇಕಾಗಿರುವ ನಿಯಮವನ್ನು ಮೀರಿ, ಅಧಿಕೃತ ಬಿಡುಗಡೆಗೆ ಮೊದಲೇ ಈ ಜಿಲ್ಲೆಯಲ್ಲಿ ಎಷ್ಟು ಶಂಕೆ, ಎಷ್ಟು ಸಾಧ್ಯತೆ ಎಂದು ಪ್ರಶ್ನಾರ್ಥಕ ಚಿಹ್ನೆ ಬಳಸಿ ವರದಿ ಮಾಡುತ್ತಿವೆ. ಆ ಮೂಲಕ ತಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿವೆ. ಒಟ್ಟಿನಲ್ಲಿ ದಿನದ 24 ಗಂಟೆಯೂ ಕೋವಿಡ್, ಕೋವಿಡ್, ಕೋವಿಡ್, ಇಷ್ಟು ಜನರಿಗೆ ಇಂದು ಸೋಂಕು ತಗುಲಿದೆ, ಇಷ್ಟು ಜನ ಮರಣ ಹೊಂದಿದರು, ಜಿಲ್ಲೆಯಲ್ಲಿ ಎಷ್ಟು, ರಾಜ್ಯದಲ್ಲಿ ಎಷ್ಟು, ದೇಶದಲ್ಲಿ ಎಷ್ಟು, ಬೇರೆ ಬೇರೆ ದೇಶಗಳಲ್ಲಿ ಎಷ್ಟು ಹೀಗೆ ಇಡೀ ದಿನ ಮಾಧ್ಯಮಗಳೆಲ್ಲವೂ ಕೋವಿಡ್‌ಮಯ.



Scanned with OKEN Scanner
Scanned with OKEN Scanner

National Seminar on Human Rights
Tumbe Group of International Journals
ISSN: 2581-8511 Volume-5(Special Issue 1)2022

• ಸರ್ಕಾರದ ವಕ್ತಾರರಂತೆ ಬಿಂಬಿತವಾಗುತ್ತಿವೆ: ದೇಶದಲ್ಲಿ ಏನೇ ನಡೆದರೂ ಅದರ ಬಗ್ಗೆ ವಸ್ತುನಿಷ್ಠ ವರದಿ ನೀಡಬೇಕಾದ ಮಾಧ್ಯಮಗಳು ತಮ್ಮ ಜವಾಬ್ದಾರಿಯನ್ನು ಮರೆತಿವೆ. ಶಾಸಕಾಂಗ, ಕಾರ್ಯಾಂಗ ಅಷ್ಟೇ ಏಕೆ ನ್ಯಾಯಂಗದ ಅಧಿಕೃತ ವಕ್ತಾರರಂತೆ ಬಿಂಬಿಸಿಕೊಳ್ಳುತ್ತಿವೆ. ಬಹುತೇಕ ಏಕಪಕ್ಷೀಯ ಅಥವಾ ಏಕವ್ಯಕ್ತಿ ಆರಾಧನೆ ಮಾಡುತ್ತಿರುವ ಬಹುತೇಕ ಪತ್ರಿಕೆಗಳು, ಖಾಸಗಿ ವಾಹಿನಿಗಳು ಸರ್ಕಾರದ ಕಾರ್ಯವನ್ನು ಪ್ರಶ್ನಿಸುತ್ತಲೇ ಸರ್ಕಾರದ ಪರವಾಗಿಯೂ ಕೆಲಸ ಮಾಡುತ್ತಿವೆ. ಯಾವುದೋ ಮೂಲದಿಂದ ವಿವರ ಪಡೆದವರು, ಅದು ಅಧಿಕೃತವೆಂದೇ ಬಿಂಬಿಸುತ್ತಾ ಮುಂದೆ ಹೀಗೇ ಆಗಬಹುದು, ಆಗುತ್ತದೆ ಎಂದು ಖಚಿತವಾಗಿ ಹೇಳುತ್ತಾ ಸರ್ಕಾರದ ಅಧಿಕೃತ ವಕ್ತಾರರಂತೆ ಕಾರ್ಯ ನಿರ್ವಹಿಸುತ್ತಿವೆ. ಅಷ್ಟೇ ಏಕೆ ಮಾಧ್ಯಮಗಳ ಈ ಪ್ರವೃತ್ತಿಗೆ ನ್ಯಾಯಾಂಗವೂ ಹೊರತಾಗಿಲ್ಲ.

• ನಂಬಿಕೆ ಕಳೆದುಕೊಳ್ಳುತ್ತಿರುವ ಮಾಧ್ಯಮಗಳು: ಮನರಂಜನಾ ದೃಷ್ಟಿಕೋನ, ಎಲ್ಲರಿಗಿಂತ ಮೊದಲು ತಾವೇ ಸುದ್ದಿ ನೀಡಬೇಕೆನ್ನುವ ಹಪಾಹಪಿ, ಸರಿತಪ್ಪುಗಳ ಖಚಿತ ಅರಿವು ಇಲ್ಲದಿರುವುದು, ಯಾರೋ ಒಬ್ಬರನ್ನು ಓಲೈಸುವುದು, ಕಾಸಿಗಾಗಿ ಸುದ್ದಿ, ವಾಣಿಜ್ಯ ಜಾಹಿರಾತುಗಳ ಹೆಚ್ಚಳ, ಬಲಪಂಥೀಯ ನಿಲುವುಗಳನ್ನೇ ಹೆಚ್ಚಾಗಿ ಬಿಂಬಿಸುವುದು, ಎಡಪಂಥೀಯ ಚಿಂತಕರನ್ನು ದೇಶದ್ರೋಹಿಗಳಂತೆ ಬಿಂಬಿಸುವುದು, ನಿಗದಿತ ಸಮುದಾಯವೊಂದನ್ನು ಗುರಿಯಾಗಿಸಿಕೊಂಡು ಸಮಾಜದಲ್ಲಿ ಕೋಮು ದ್ವೇಷವನ್ನು ಬಿತ್ತುವುದು, ಕೋವಿಡ್‌ನಂತಹ ಮಾರಕ ಸೋಂಕಿನ ಕುರಿತು ವರದಿ ನೀಡುವಲ್ಲಿಯೂ ಮನರಂಜನಾ ದೃಷ್ಟಿಕೋನವಿರುವುದು, ಸುಳ್ಳನ್ನೇ ಬಿಂಬಿಸುವುದು - ಇವೆಲ್ಲದರಿಂದ ಬೇಸತ್ತಿರುವ ಚಿಂತಕರು ಮಾಧ್ಯಮಗಳಿಂದ ದೂರ ಸರಿಯುತ್ತಿರುವುದು ಈ ಹೊತ್ತಿನ ದುರಂತ. ಬಹುತೇಕ ಜನರು ಸುದ್ದಿವಾಹಿನಿ ವೀಕ್ಷಣೆಯನ್ನು ಕೈಬಿಟ್ಟಿರುವುದು ಇವತ್ತಿನ ನಕಾರಾತ್ಮಕ ಬೆಳವಣಿಗೆ. ಹೀಗಾಗಿ ಜನಸಮುದಾಯ ಮತ್ತು ಸಮಾಜದ ಬೆಸೆಯುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾದ ಮಾಧ್ಯಮಗಳು ನಂಬಿಕೆ ಕಳೆದುಕೊಳ್ಳುತ್ತಿವೆ.

**ಉಪಸಂಹಾರ**

ಬಹುತೇಕ ದೇಶಗಳನ್ನು ಬಾಧಿಸುತ್ತಿರುವ ಪ್ರಪಂಚದ ಪೆಡಂಭೂತ ಕೋವಿಡ್ ಸೋಂಕು ಇನ್ನು ನಿಯಂತ್ರಣಕ್ಕೆ ಬಂದಿಲ್ಲ. ಬೇರೆ ಬೇರೆ ದೇಶಗಳಲ್ಲಿ ಸೋಂಕಿನ ಪ್ರಮಾಣ, ಸಾವಿನ ಪ್ರಮಾಣ ಹೆಚ್ಚುತ್ತಿದ್ದರೂ ಭಾರತದಲ್ಲಿ ಸ್ವಲ್ಪ ಆಶಾದಾಯಕ ಸ್ಥಿತಿ ಕಂಡುಬರುತ್ತಿದೆ. ಸೋಂಕಿನ ಪ್ರಮಾಣ ಹೆಚ್ಚಿದ್ದರ್ದೂ ಅದರಿಂದ ಗುಣಮುಖರಾಗುವ ಪ್ರಮಾಣ ಹೆಚ್ಚಿದೆ. ಹಾಗೆಯೇ ಮರಣ ಪ್ರಮಾಣವೂ ತುಂಬಾ ಕಡಿಮೆಯಿದೆ. ಜನಸಮುದಾಯ ಪ್ರತಿನಿತ್ಯವೂ ಪತ್ರಿಕೆಗಳ ಮೂಲಕ, ಟಿವಿ ವಾಹಿನಿಗಳ ಮೂಲಕ ಕೋವಿಡ್ ಸ್ಥಿತಿಗತಿಯನ್ನು ಅರಿತುಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ಗಂಟೆಯಂತೆ ಕಾರ್ಯನಿರ್ವಹಿಸುವ, ಜನರು ಮಾನಸಿಕ ಕ್ಷೋಭೆಗೆ ಒಳಗಾಗದಂತೆ ಸಮತೂಕದಿಂದ ಪರಿಸ್ಥಿತಿ ನಿಭಾಯಿಸುವ ಚಾಕಚಕ್ಯತೆಯನ್ನು ಮಾಧ್ಯಮಗಳು ರೂಪಿಸಿಕೊಳ್ಳಬೇಕಾಗಿದೆ. ಸಮಾಜದಲ್ಲಿ ಭಯ ಬಿತ್ತದೆ, ಕೋಮುಭಾವನೆಗೆ ಅವಕಾಶ ನೀಡದೆ, ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗದೆ ನಿಭಾಯಿಸುವ ಹೊಣೆಗಾರಿಕೆ ಮಾಧ್ಯಮಗಳ ಮೇಲಿದೆ.

**ಗ್ರಂಥ ಋಣ:**

[1] ಅವಲೋಕನ
[2] ಸಮೂಹ ಮಾಧ್ಯಮ
[3] ಇಂಟರ್‌ನೆಟ್
[4] ದಿನಪತ್ರಿಕೆಗಳು
[5] ವಿಕಿಪೀಡಿಯಾ



Scanned with OKEN Scanner
Scanned with OKEN Scanner